"ಪರವಾನಿಗೆ ಪತ್ರ"

ವಸತಿ ಸಮುಚ್ಛಯ ಕಟ್ಟಡ ನಿರ್ಮಾಣಕ್ಕೆ ಮಾತ್ರ

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

BBMP | Addl. Dir / JD North / LP / 0105 / 17-18

**No. A 40322**

02 BF + GF + 25 UF

ಸಿಟಿ ಮಜಕೂರ್ ......ಮಹದೇವಪುರ ವಲಯ...... ನೇ ಡಿವಿಜನ್ ......ಮಹದೇವಪುರ ವಲಯ...... ನೇ
Sri. Kamala Sagar M/S. Total Environment Construction Pvt. Ltd. Katha No. 28. Sy No. 54/1. 54/2. 54/3. 54/4. 54/5
ನಂಬರು ಮನೆಗೆ ಮಾಲೀಕ / ವಾಸಸ್ಥರಾದ 54/6. 54/7. 54/8. 54/9. 54/10. 54/11. -55. 56. & Khatha No-46. Sy No. 68, 69/1. 69/2. 74/3. 76. 86/2. Bileshivale village Bidarahalli Hobli ward No-54
ನೀವು Bangalore East Taluk Bangalore ನೇ ನಂಬರಿನಲ್ಲಿ ಕಟ್ಟಡ ಕಟ್ಟಬೇಕೆಂಬ ವಿಷಯ

ಕುರಿತು ಬರೆದುಕೊಂಡ ತಾರೀಖು ......09-08-2017...... ನಲ್ಲಿ ಕೊಟ್ಟ ಅರ್ಜಿ
ಮಾನ್ಯ ಆಯುಕ್ತರು ಸದರಿ ನಕ್ಷೆಗೆ ಮಂಜೂರಾತಿ ನೀಡಲು ದಿ: 10-10-2017 ರಂದು ಅನುಮೋದನೆ ನೀಡಿರುತ್ತಾರೆ. ಸದರಿ ನಕ್ಷೆಯ ಕಾಲಮಿತಿಯು ಐದು ವರ್ಷಗಳು
ಜಾಹೀರಾಯಿತು. ಮಾತ್ರ ದಿ: 14-11-2019 ಕ್ಕೆ ಅಂತ್ಯಗೊಳ್ಳುತ್ತದೆ. ಅರ್ಜಿದಾರರು - ರಸೀದಿ ಸಂಖ್ಯೆ: RE-ifms 331-TP/000471 ದಿ: 25-10-17 ರಂದು ಕೆಳಕಂಡ ಶುಲ್ಕಗಳನ್ನು ಪಾವತಿಸಿರುತ್ತಾರೆ. ① ನೆಲಬಾಡಿಗೆ ರೂ- 6620584/- ② ಉತ್ತಮತೆ ಶುಲ್ಕ ಕಟ್ಟಡ ರೂ- 2914248/- ③ ಭದ್ರತಾ ಠೇವಣಿ ರೂ- 14712408/- ④ ಲೈಸೆನ್ಸ್ ಶುಲ್ಕ ರೂ- 13303226/- ⑤ ನಕ್ಷೆ ಪ್ರತಿಗಳ ಶುಲ್ಕ ರೂ- 344000/- ⑥ ಬದಲಾವಣೆ ಶುಲ್ಕ ರೂ- 30000/- ⑦ ಕಾರ್ಮಿಕರ ಕಲ್ಯಾಣ ನಿಧಿ ...
ಸೂಚನೆ :- ಇದರ ಹಿಂಭಾಗದಲ್ಲಿ ಅಡಕವಾಗಿರುವ ಷರತ್ತುಗಳನ್ನು ಗಮನಿಸಿ ಅದಕ್ಕೆ ಒಳಪಟ್ಟು ನಡೆದುಕೊಳ್ಳಬೆಕು. ಅವುಗಳಲ್ಲಿ ಯಾವುದೇ ಒಂದು ಷರತ್ತುಗಳನ್ನು ಉಲ್ಲಂಘಿಸಿರುವುದಾಗಿ ಕಂಡುಬಂದರೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಕ್ಟಿನ 462ನೇ ನಿಬಂಧನೆ ಮೇಲ್ಕಂಡ ಕ್ರಮ ಜರುಗಿಸಲಾಗುವುದು.
ಸೇವಾ ಶುಲ್ಕ ರೂ- 319129/- Round off Rs. 406/- ಒಟ್ಟು ಮೊತ್ತ ರೂ- 35524000/- ಕಟ್ಟಡ ಹಾಗೂ ಇತರೆ ಕಾರ್ಮಿಕರ ಕಲ್ಯಾಣ ಮಂಡಳಿಯವರ ಹೆಸರಿಗೆ ರೂ- 21694000/- ನ EFT -241079 29 ಮುಖೇನ Receipt No. H01 38388/2017. ದಿನಾಂಕ: 23-10-2017 ರಂದು ಪಾವತಿಸಿರುತ್ತಾರೆ.

15/11/17

Joint Director of Town Planning (North)
Bruhat Bangalore Mahanagara Palike
Bangalore

ಕಮೀಷನರ್,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ತಾರೀಖು ......15...... ನೇ ......11......
.................... ಮಾಹೆ 2017 ಇಸವಿ

15/11/17   15/11   15/11

# ಷರತ್ತುಗಳು

1. ಲೈಸನ್ಸು ಪಡೆದ ಎರಡು ವರ್ಷದೊಳಗಾಗಿ ಕೆಲಸವನ್ನು ಪೂರೈಸಿ ಆಫೀಸಿಗೆ ಬರಹ ಮೂಲಕ ತಿಳಿಸತಕ್ಕದ್ದು.
2. ಮಂಜೂರಾದ ಪ್ಲಾನಿಗೆ ವಿರೋಧವಾದ ಯಾವ ಕಾಮಗಾರಿಯನ್ನೂ ನಡೆಸಕೂಡದು.
3. ಕಾರ್ಪೊರೇಷನ್ ಅಧಿಕಾರಿಗಳು ಅಪೇಕ್ಷಿಸಿದ ವೇಳೆ ತೋರಿಸಲು, ಲೈಸೆನ್ಸು ಮತ್ತು ಪ್ಲಾನು ಸಹಾ ಕಟ್ಟುವ ಸ್ಥಳದಲ್ಲಿ ಸರ್ವದಾ ಸಿದ್ಧವಾಗಿರಬೇಕು.
4. ಕಟ್ಟಡದ ನಿವೇಶನದಲ್ಲಿ ಹಳ್ಳ ತೆಗೆಯಕೂಡದು.
5. ಪಾಯಿಖಾನೆ ಗೊತ್ತುಮಾಡಿರುವ ಸ್ಥಳವನ್ನು ಕಾರ್ಪೊರೇಷನ್ ರೆಗ್ಯುಲೇಷನ್ ಅನುಸರಿಸಿ ಪ್ರತಿದಿನವೂ ಪಾಕ್ ಮಾಡಲು ತಕ್ಕ ಏರ್ಪಾಡು ಮಾಡಬೇಕು. ಪಾಯಿಖಾನೆಯ ನೆಲಕ್ಕೂ ಮತ್ತು ಸುತ್ತಲೂ ಕಲ್ಲು ಕಟ್ಟಿಸಿ ನೀರು ಭೂಮಿಗೆ ಇಳಿಯದಂತೆ ಸಿಮೆಂಟಿನಿಂದ ಸಂದುಗಾರೆ ಮಾಡಿಸತಕ್ಕದ್ದು.
6. ಮಾಳಿಗೆ ನೀರು ಕಾರ್ಪೊರೇಷನ್ ಜಮೀನು ಅಥವಾ ರಸ್ತೆ ಮೇಲೆ ಬೀಳದಂತೆ ಮೇಲಿನಿಂದ ಕೆಳಗಿನವರೆಗೂ ಗೋಡೆಗೆ ಲಗತ್ತಾಗಿ ಗಚ್ಚಿ ದಿಂಡನಿಂದ ತಗಡಿನಿಂದ ಯಾ ವಂಪಾದ ದೋಣಿಗಳನ್ನಿಟ್ಟು ಮೊಹರಿಗೆ ಸರಿಯಾಗಿ ಬಿಡತಕ್ಕದ್ದು.
7. ನೀವು ಕಟ್ಟತಕ್ಕ ಕಟ್ಟಡದ ಗೋಡೆಯ ಅಸ್ತಿಭಾರವು ರಸ್ತೆ ಪಕ್ಕದಲ್ಲಿರುವ ಮೊಹರಿಯಿಂದ ಒಂದೂವರೆ ಅಡಿಗಿಂತ ಕಮ್ಮಿ ದೂರದಲ್ಲಿರಕೂಡದು.
8. ಈ ಲೈಸೆನ್ಸಿನಿಂದ ನೀವು ಗೈರ್ ಮಾಮೂಲು ದೋಣಿ ಅಥವಾ ಬಚ್ಚಲು ನೀರು ತಿರುಗಿಸುವುದಕ್ಕೂ ಹೊಸದಾಗಿ ದಾರಿ ಮಾಡಿ ಕೊಳ್ಳುವುದಕ್ಕೂ ಬಾಗಿಲು ಕಿಟಕಿಗಳನ್ನು ಇಡಿಸುವುದಕ್ಕೂ ಅಥವಾ ಜಮೀನು ಸೇರಿಸಿಕೊಳ್ಳುವುದಕ್ಕೂ ಅಪ್ಪಣೆ ಪಡೆದಿರುವುದಿಲ್ಲ.
9. ಕಟ್ಟಡದ ಸಾಮಾನುಗಳನ್ನು ಸರ್ಕಾರಿ ರಸ್ತೆ, ಮೊಹರಿ ಯ ಕಾರ್ಪೊರೇಷನ್ ಜಮೀನಿನಲ್ಲಿ ಹಾಕಿಸಕೂಡದು.
10 ಕಟ್ಟಡದ ನಿವೇಶನದಲ್ಲಿ ಲಂಟಾಣ, ಕತ್ತಾಳಿ, ಬೊಂತೆಕತ್ತಾಳಿ ಇತರ ಆಕ್ಷೇಪಕರವಾದ ಗಿಡಗಳ ಬೇಲಿಯನ್ನು ಅಥವಾ ಮುಳ್ಳು ತಂತಿಯ ಬೇಲಿಯನ್ನು ಹಾಕಿಸಕೂಡದು,
11. ಕಟ್ಟಡದ ಸೂರು ಯಾ ಲೋಮೆಗಳ ಕಿಟಕಿಗಳ ಮೇಲಿನ ಬಿಸಿಲ್ತಡಿಕೆ, ದೋಣಿಗಳು ಬೀದಿಯ ಮೊಹರಿಯಿಂದ ಮುಂದಕ್ಕೆ ಉಜ್ಜಾಯಿಸಿ ಬರಕೂಡದು.
12. ಲೈಸೆನ್ಸಿನಿಂದ ಕಟ್ಟತಕ್ಕ ನಿವೇಶನಕ್ಕೆ ಲೈಸೆನ್ಸುದಾರರಿಗೆ ಇದಕ್ಕೆ ಮೊದಲು ಇಲ್ಲದ ಹಕ್ಕುದಾರಿ ಈಗ ಹೊಸದಾಗಿ ಉಂಟಾಗುವುದಿಲ್ಲ ಮತ್ತು ಇತರರಿಗೆ ಇರಬಹುದಾದ ಹಕ್ಕಿಗೆ ಯಾವ ಕುಂದಕವೂ ಉಂಟಾಗುವುದಿಲ್ಲ.
13. ಹೊಗೆ ಹೋಗಲು ಇಡತಕ್ಕ ಚಿಮಣಿಗಳು ಮಾಳಿಗೆ ಮಟ್ಟಕ್ಕಿಂತ 4 ಅಡಿ ಕಮ್ಮಿ ಇಲ್ಲದಂತೆ ಎತ್ತರಿಸಿ ಕಟ್ಟಬೇಕು.
14. ಮೆಟ್ಟಲುಗಳನ್ನು ಬೇಸುಮೆಂಟಿನಲ್ಲಿ ಇಟ್ಟುಕೊಳ್ಳಬೇಕೇ ಹೊರತು ಕಟ್ಟಡದಿಂದೀಚೆಗೆ ಕಾರ್ಪೊರೇಷನ್ ಜಮೀನಿನ ಮೇಲೆ ಅಥವಾ ಮೊಹರಿನ ಮೇಲೆ ಬರುವಂತೆ ಇರಕೂಡದು.
15. ಕಿಟಕಿಗಳು, ಮನೆಗಳ ಅಥವಾ ಬೇಲಿಗಳ ಬಾಗಿಲುಗಳು ಒಳಭಾಗಕ್ಕೆ ತೆರೆಯುವಂತೆ ಇಡಿಸಬೇಕಲ್ಲದೆ ಕಾರ್ಪೊರೇಷನ್ ಜಾಗದ ಮೇಲೆ ಬರುವಂತೆ ಇಡಿಸಕೂಡದು.
16. ಗೋಡೆಗಳನ್ನು ಪೂರ್ತ ಮಣ್ಣಿನಿಂದ ಕಟ್ಟಿಸಕೂಡದು.
17. ಕಟ್ಟಡಗಳನ್ನು ಪೂರೈಸಿದ ಒಂದು ತಿಂಗಳೊಳಗಾಗಿ ಕಾರ್ಪೊರೇಷನ್ ಆಫೀಸಿಗೆ ಬರಹ ಮೂಲಕ ತಿಳಿಸತಕ್ಕದ್ದು.
18. ಮೇಲ್ಕಂಡ ಷರತ್ತುಗಳಿಗೂ ಮತ್ತು ಬೈಲಾಗಳಲ್ಲಿ ನಮೂದಿಸಿರುವ ಷರತ್ತುಗಳಿಗೂ ವಿರೋಧವಾಗಿ ನಡೆದಲ್ಲಿ ನಿಮ್ಮನ್ನು ಕಾರ್ಪೊರೇಷನ್ ಆಕ್ಟಿನ 381 ನೇ ಇಲ್ಲವೇ 462 ನೇ ನಿಬಂಧನೆಯಂತೆಯಾಗಲೀ ಅಥವಾ ಇವೆರಡು ನಿಬಂಧನೆಗಳಂತೆಯಾಗಲೀ ಶಿಕ್ಷೆಗೆ ಗುರಿಪಡಿಸಲಾಗುವುದು.